ಶ್ರೀ ಎಚ್ ಟಿ. ಕೃಷ್ಣಪ್ಪ.– ಈ ಬಗ್ಗೆ ಉತ್ತರ ಹೇಳಿತ್ತಾ ರೀಜನಲ್ ರೆಪ್ರಸೆಂಟೇಶನ್ ಕೊಟ್ಟಿದೀವಿ ಎಂದು ಆಪ್ಪಣೆ ಕೊಡಿಸಿದ್ದಿರೀ ಎಲ್ಲಿ ರೆಪ್ರಸೆಂಟೇಷನ್ ಕೊಟ್ಟಿಲ್ಲವೋ ಅಲ್ಲಿ ಗಮನಕ್ಕೆ ತಂದರೆ ಮಾಡಿ ಕೊಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ.- ಆ ರೀತಿ ಬಿಟ್ಟು ಹೋಗಿದ್ದರೆ ಫರ್ದರ್ ವೇಕೆನ್ಸಿ ಬಂದರೆ ಅದನ್ನು ವಿಚಾರ ಮಾಡೋಣ. ಎಲ್ಲೆಲ್ಲಿ ಸಾಧ್ಯವೋ ಅಲ್ಲಿ ಮಾಡುವುದಕ್ಕೆ ಸಾಧ್ಯವಿದ್ದರೆ ಮಾಡೋಣ.

ಶ್ರೀ ಕೆ. ಆರ್. ಶ್ರೀನಿವಾಸಲು ನಾಯ್ಡು.— ತಾವು ಆಭ್ಯರ್ಥಿಗಳನ್ನು ಆಯ್ಕೆ ಮಾಡಿದ್ದೀರಿ. ಕೆಲವರು ಇನ್ನು ಡ್ಯೂಟಿಗೆ ಹೋಗದೆ ಇರುವುದರಿಂದ ಪುನಃ ಪರಿಶೀಲನೆಮಾಡಿ ಎರಡನೇ ಲಿಸ್ಟ್ ಮಾಡುತ್ತೀರಾ?

ಶ್ರೀ ಎಚ್. ಸಿದ್ದವೀರಪ್ಪ - ಇದು ಒಂದು ಮಾಡುವುದಕ್ಕೆ ಇಷ್ಟು ತರ್ಕ ನಡೆಯುತ್ತಿದೆ ಇನ್ನೊಂದು ಮಾಡುವುದು ಬೇಕೋ ಬೇಡವೋ ವಿಚಾರ ಮಾಡುತ್ತೇನೆ ಸರ್ಕಾರದ ದೃಷ್ಟಿಯಲ್ಲಿ ಮಾಡಬೇಕು ಎಂದು ಅವಶ್ಯಕ ಇದ್ದರೆ ಮಾಡುತ್ತೇನೆ.

2-00 ಘಂಟೆ

ಶ್ರೀ ಎಚ್. ಟಿ. ಕೃಷ್ಣಪ್ಪ.– ಈ ನೇಮಕಗಳಲ್ಲಿ ಪಕ್ಷಪಾತ ಎನ್ನುವ ಗುಮಾನಿ ಸಾಮಾನ್ಯವಾಗಿ ಬಂದಿದೆ. ಆದುದರಿಂದ ಈಗ ಮಾಡಿರತಕ್ಕ ಪಟ್ಟಿಯನ್ನು ಪುನರ್‌ಪರಿಶೀಲನೆ ಮಾಡಿ ನೇಮಕ ಮಾಡುಪುದಕ್ಕೆ ಸಾಧ್ಯವೇ?

ಶ್ರೀ ಎಚ್. ಸಿದ್ದವೀರಪ್ಪ.- ಪಕ್ಷಪಾತ ಮಾಡಿದ್ದೀನೆಂದು ಹೇಳುವುದನ್ನು ನಾನು ನಿರಾಕರಿಸುತ್ತೇನೆ ಯಾವುದೇ ಪಕ್ಷಪಾತ ಮಾಡಿಲ್ಲ. ಪಕ್ಷಪಾತವೇನಾದರೂ ಮಾಡಿದ್ದರೆ ಯಾರು ಯಾರು ಹೇಳಿದ್ದಾರೆ ಅವನ್ನು ಗಮನದಲ್ಲಿಟ್ಟುಕೊಂಡು ಮಾಡಿದ ರೀತಿ, ರೀತಿ ನಿಯಮಾವಳಿ ಈ ಟಿಪೊರರಿ ಅಪಾಯಿಂಟ್‌ಮೆಂಟ್ಸ್‌ಗೆ ಇಲ್ಲ. ಎಂ.ಬಿ.ಬಿ.ಎಸ್ ಪಾಸಾಗಿರಬೇಕು ಹೌಸ್ ಸರ್ಜೆನ್ಸಿ ಮುಗಿದಿರಬೇಕು. ಆಂಥವರು ಯಾವಾದರೂ ಇದ್ದರೆ ರೀಜನಲ್ ರೆಪ್ರಸೆಂಟೇಷನ್, ಮುಂತಾದುವನ್ನು ಗಣನೆಗೆ ತೆಗೆದುಕೊಂಡು ನೇಮಕಗಳನ್ನು ಮಾಡಲಾಗಿದೆ. ಪಬ್ಲಿಕ್ ಸರ್ವಿಸ್ ಕಮಿಷನ್ನಿಗಿಂತ ಅನೇಕ ರೀತಿಯಲ್ಲಿ ಎಷ್ಟೋ ಹಿಂದುಳಿದವರ್ಗಗಳಿಗೆ ಪೆಡ್ಯೂಲ್ ಕ್ಯಾಸ್ಟ್ ಮತ್ತು ಪೆಡ್ಯೂಲ್ ಟ್ರೈಬ್ಸ್‌ನವರಿಗೆ ಪ್ರಾತಿನಿಧ್ಯ ಕೊಟ್ಟಿದ್ದೀರ ಎಂದು ಎಷ್ಟೋ ಜನ ಹೇಳಿದ್ದಾರೆ ಪಕ್ಷಪಾತವಾಗಿದ ಎನ್ನುವುದನ್ನು ಮಾನ್ಯ ಸದಸ್ಯರೊಬ್ಬರೇ ಹೇಳುತ್ತಿದ್ದಾರೆ, ಅದನ್ನು ನಾನು ನಿರಾಕರಿಸುತ್ತೇನೆ.

Held over Question No. 89 (held over on 2-3-73)

POSTING OF GAZETTED OFFICERS IN THEIR HOME TALUK DISTRICT

89 SRI B G. BANAKAR (Hirekerur) —

Will the Chief Minister be pleased to state :—

(*a*) whether it has come to the notice of the Government that a large number of Gazette Officers who are navties of Dharwar District are serving in their own Home District and even in their Home Taluk in Dharwar District ;

(*b*) if so, whethre the Government would like to keep and continue them in their Home District and Home Taluk ;

(*c*) the period within which all the Gazetted Officrrs in Dharwar District will be transferred out of theie Home District or Home Taluk

SRI D. DEVARAJA URS (Chief Minister).—

(*a*) Yes, two officers are known to be natives of Dharwar District.

(*b*) Government will examine

(*c*) Posting and transfers are made in the exigencies of public service.

ಶ್ರೀ ಬಿ. ಜಿ. ಬಣಕಾರ್—ಧಾರವಾಡ ಜಿಲ್ಲೆಯಲ್ಲಿರುವಂಥ ಗೆಜೆಟೆಡ್ ಆಫೀಸರಿಂಗಳ ಹುದ್ದೆಗಳೆಷ್ಟು ? ಅವುಗಳ ಪೈಕಿ ಧಾರವಾಡ ಜಿಲ್ಲೆಯವರೇ ಗೆಜೆಟೆಡ್ ಅಧಿಕಾರಿಗಳಾಗಿ ಎಷ್ಟು ಜನರಿದ್ದಾರೆ ?

† ಶ್ರೀ ಡಿ. ದೇವರಾಜ ಅರಸ್.—ಸೂಮಾರು ೮೨

ಶ್ರೀ ಬಿ. ಜಿ. ಬಣಕಾರ್.—ಗೆಜೆಟೆಡ್ ಆಫೀಸರ್ ಜನರನ್ನು ಅವರವರ ಜಿಲ್ಲೆಯಲ್ಲಿಯೇ ಹಾಕಬಾರದೆಂದು ಸರ್ಕಾರದ ಆದೇಶವೇನಾದರೂ ಇದೆಯೇ ಹೇಗೆ ?

ಶ್ರೀ ಡಿ. ದೇವರಾಜ ಅರಸ್.—ಹಾಕಬಾರದು ಎನ್ನುವ ಆದೇಶವೇನೂ ಇಲ್ಲ. ಅವರ ಜಿಲ್ಲೆಯಲ್ಲಿ ಬೇರೆ ಬೇರೆ ತಾಲ್ಲೂಕುಗಳಲ್ಲಿ ಹಾಕುತ್ತೇವೆ. ಸಾಧ್ಯವಿದ್ದರೆ ಅವರವರ ತಾಲ್ಲೂಕುಗಳಲ್ಲಿ ಹಾಕಬಾರದು ಎನ್ನುವ ರೂಲ್ಸ್ ಇಲ್ಲವೆ ಹೋದರೂ ಒಂದು ಕನ್‌ವೆನ್‌ಷನ್ ಹಾಕಿದೆ.

ಶ್ರೀ ಬಿ. ಜಿ. ಬಣಕಾರ್ —ಪ್ರಾಥಮಿಕ ಶಾಲಾ ಶಿಕ್ಷಕರು, ಗ್ರಾಮಸೇವಕರು, ತಲಾಟಿಗಳು ಇಂಥವರನ್ನು ಅವರವರ ತಾಲ್ಲೂಕಿನಲ್ಲಿ ಇಡಬಾರದೆಂದು ಸರ್ಕಾರದ ಒಂದು ಧೋರಣೆ ಇರುವಕ್ಕೆ ಸನ್ನಿವೇಶದಲ್ಲಿ ಈ ಗೆಜೆಟೆಡ್ ಅಧಿಕಾರಿಗಳನ್ನು ಅವರವರಜಿಲ್ಲೆಯಲ್ಲಿ ಇಡತಕ್ಕದ್ದು ಸೂಕ್ತವಲ್ಲ ಎಂದು ನನ್ನ ಅಭಿಪ್ರಾಯ. ಈ ಬಗ್ಗೆ ಸರ್ಕಾರದವರು ಪ್ರಾಥಮಿಕ ಶಾಲಾ ಶಿಕ್ಷಕರು, ಗ್ರಾಮಸೇವಕರು ತಲಾಟಿಗಳು ಇವರನ್ನೆಲ್ಲ ಅವರವರ ತಾಲ್ಲೂಕಿನಲ್ಲಿ ಇಡಬಾರದೆಂದು ಯಾವರೀತಿ ಕ್ರಮ ತೆಗೆದುಕೊಂಡಿದ್ದಾರೆಯೋ ಅದೇ ರೀತಿ ಈ ಗೆಜೆಟೆಡ್ ಅಧಿಕಾರಿಗಳನ್ನೂ ಜಿಲ್ಲೆಯಿಂದ ಹೊರಗೆ ಇಡಪ್ಪೂ ಕಲುಹಿಸುವುದಕ್ಕೆ ಪ್ರಯತ್ನ ಮಾಡುತ್ತಾರೆಯೇ ?

ಶ್ರೀ ಡಿ. ದೇವರಾಜ ಅರಸ್.—ಸಂಖ್ಯೆ ಬಹಳ ಜಾಸ್ತಿಯಾಗಿದೆ. ವರ್ಗದಂ ಅವರನ್ನೆಲ್ಲ ಕಳುಹಿಸುವುದು ಕಷ್ಟವಾಗುತ್ತದೆ. ೮೨ ಜನರನ್ನೂ ಒಂದೇ ಸಲ ವರ್ಗ ಮಾಡುವುದು ಕಷ್ಟವಾಗುತ್ತದೆ. ಹಂತಹಂತವಾಗಿ ಹೊರಗೆ ಕಳುಹಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ, ಕಳುಹಿಸುತ್ತೇನೆ. ಒಂದೇ ಸಾರಿ ಆಗುವುದಿಲ್ಲ. ಧಾರವಾಡ ಜಿಲ್ಲೆ ದೊಡ್ಡ ಜಿಲ್ಲೆ, ಸುಮಾರು ೧೮ ತಾಲ್ಲೂಕುಗಳಿವೆ. ಆದ್ದರಿಂದ ಯಾವ ದಾದರೂ ಒಬ್ಬ ಅಧಿಕಾರಿ ಹುಟ್ಟಿದ ಸ್ಥಳ ಅದೇ ಜಿಲ್ಲೆಗೆ ಸೇರಿದ್ದರೆ ಅಂಥವರನ್ನು ೧೮ ತಾಲ್ಲೂಕುಗಳಿಗೂ ಹಾಕಬಾರದು ಎಂದು ಹೇಳುವುದು ಕಷ್ಟವಾಗುತ್ತದೆ. ಸಾಧ್ಯವಾದಷ್ಟೂ ಆಯಾ ಹುದ್ದೆಗಳ ಪ್ರಾಮುಖ್ಯತೆಯನ್ನು ನೋಡಿಕೊಂಡು ಅವರನ್ನು ಬೇರೆ ಬೇರೆ ಜಿಲ್ಲೆಗಳಿಗೆ ಹಂತ ಹಂತವಾಗಿ ಹಾಕುವುದಕ್ಕೆ ಸರ್ಕಾರ ಮನಸ್ಸು ಮಾಡುತ್ತದೆ.

Mr. SPEAKER.—Now Question Hour is over.

QUESTIONS FOR ANSWERS ON THE DAY (BUT NOT TAKEN UP)

DEATHS DUE TO CHOLERA IN GULBARGA DISTRICT

212 SRI BAPUGOWDA (Shahapur).—Will the Minister for Health be pleased to state :—

(*a*) the number of persons that died due to attkcak of Cholera in Gulbarga District during the last six months ;

(*b*) the preventive measures taken by Government to check the spread of this epidimic ?